ಒಎಸ್ ಸಂ.ಃ 175/2013
ಪಿಡಬ್ಲ್ಯೂ ಃ 1
ದಿನಾಂಕ :24-07-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ-7, 9 ರಿಂದ 11 ಮತ್ತು 19 ರವರ ಪರ ಶ್ರೀ ಕೆ.ಆರ್.ಆರ್ ವಕೀಲರಿಂದ

15 ಕ್ಕಿಂತ ಹೆಚ್ಚು ಜನರ ಮೇಲೆ ನಮ್ಮ ತಂದೆ ಕೇಸು ಹಾಕಿರುತ್ತಾರೆ. ಒಟ್ಟು 27 ಜನರ ಮೇಲೆ ನಮ್ಮ ತಂದೆ ಕೇಸು ಹಾಕಿರುತ್ತಾರೆ ಎಂದರೆ ಸರಿ. ಪ್ರತಿವಾದಿ 25 ರಿಂದ 27 ರವರನ್ನು ಯಾವ ಉದ್ದೇಶದಿಂದ ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಮುನಿವೆಂಕಟಪ್ಪ ಇವರು ಪ್ರತಿವಾದಿ 25 ರಿಂದ 27 ರವರಿಗೆ ಆಸ್ತಿ ಮಾರಾಟ ಮಾಡಿದ್ದರಿಂದ ಅವರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿರುತ್ತಾರೆ. ಮುನಿಸ್ವಾಮಿ, ವೆಂಕಟರಾಮಯ್ಯ ಮತ್ತು ಮುನಿವೆಂಕಟಪ್ಪ ಇವರು ಅಸ್ತಿಯನ್ನು ಮಾರಾಟ ಮಾಡಿರುತ್ತಾರೆ ಆದರೆ ಯಾವ ಸರ್ವೆ ನಂ.ಗಳ ಆಸ್ತಿಗಳನ್ನು ಮತ್ತು ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮುನಿಯಪ್ಪ ನಮ್ಮ ಮುತ್ತಾತನಾಗಬೇಕು. ಅವರಿಗೆ ಇಬ್ಬರು ಮಕ್ಕಳು ಅವರೆಂದರೆ ಚೆಂಗಲರಾಯಪ್ಪ ಮತ್ತು ಪಾಪಣ್ಣ ಆಗಿರುತ್ತಾರೆ. ಈ ಬಗ್ಗೆ ನಾನು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರಿಸಿರುತ್ತೇನೆ. ಮುನಿಯಪ್ಪಇವರಿಗೆ ದೊಡ್ಡವೆಂಕಟಪ್ಪ ಮತ್ತು ಚಿಕ್ಕವೆಂಕಟಪ್ಪ ಎಂಬ ಮಕ್ಕಳು ಎಂದರೆ ಸರಿಯಲ್ಲ. ದೊಡ್ಡವೆಂಕಟಪ್ಪನಿಗೆ ಇಬ್ಬರು ಮಕ್ಕಳು ಅವರೆಂದರೆ ಬೇಡರ ಪಾಪಣ್ಣ ಮತ್ತು ಚೆಂಗಲರಾಯಪ್ಪ ಎಂದರೆ ಸರಿಯಲ್ಲ. ದೊಡ್ಡವೆಂಕಟಪ್ಪ ಮತ್ತು ರಾಮಕ್ಕರವರ ಮಕ್ಕಳೇ ಪಾಪಣ್ಣ ಮತ್ತು ಚೆಂಗಲರಾಯಪ್ಪ ಎಂದರೆ ಸರಿಯಲ್ಲ. ಅವರುಗಳು ಮುನಿಯಪ್ಪನವರ ಮಕ್ಕಳಲ್ಲ ಎಂದರೆ ಸರಿಯಲ್ಲ. ನಾನು ವಂಶವೃಕ್ಷವನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಪಾಪಣ್ಣ ಇವರಿಗೆ ಮೂರು ಜನ ಮಕ್ಕಳು ಪೆದ್ದಪ್ಪಯ್ಯ, ಕಿಚ್ಚಪ್ಪ ಮತ್ತು ವೆಂಕಟೇಶಪ್ಪ, ಪೆದ್ದಪ್ಪನಿಗೆ ಇಬ್ಬರು ಹೆಂಡತಿಯರು ಅವರೆಂದರೆ ಸರಸಮ್ಮ ಮತ್ತು ಈರಮ್ಮ. ಮೊದಲ ಹೆಂಡತಿ ಚಿನ್ನಮ್ಮ ಮತ್ತು 2ನೇ ಹೆಂಡತಿ ಈರಮ್ಮ ಎಂದರೆ ಸಾಕ್ಷಿಯು 2ನೇ ಹೆಂಡತಿ ಈರಮ್ಮ, ಮೊದಲನೇ ಹೆಂಡತಿಯ ಹೆಸರು ಸರಿಯಾಗಿ ಗೊತ್ತಿಲ್ಲ ಚಿನ್ನಮ್ಮ ಎಂದು ಇರಬಹುದು ಎಂದು ಹೇಳುತ್ತಾರೆ. ಚಿನ್ನಮ್ಮನ ಮಗ ನಾರಾಯಣಪ್ಪ ಎಂದರೆ ಸರಿ. ನಾರಾಯಣಪ್ಪನಿಗೆ ಒಬ್ಬರೇ ಹೆಂಡತಿ. ನಾರಾಯಣಪ್ಪನಿಗೆ ಇಬ್ಬರು ಹೆಂಡತಿಯರು ಅವರೆಂದರೆ ತಾಯಮ್ಮ ಮತ್ತು ನಾರಾಯಣಮ್ಮ ಎಂದರೆ ಸರಿ. ನಾರಾಯಮ್ಮ ಈಗಲೂ ಜೀವಂತ ಇರುತ್ತಾರೆ ಎಂದರೆ

ಸರಿಯಲ್ಲ. ನಾರಾಯಣಮ್ಮ ಮತ್ತು ನಾರಾಯಣಪ್ಪನ ಮಕ್ಕಳೇ ಪ್ರತಿವಾದಿ 12 ರಿಂದ 16 ರವರು ಆಗಿರುತ್ತಾರೆ ಎಂದರೆ ಸರಿ.

ಪಾಪಣ್ಣನ 2ನೇ ಮಗ ಮುನಿವೆಂಕಟಪ್ಪ ಅವರ ಹೆಂಡತಿಯ ಹೆಸರು ಚಿನ್ನಮ್ಮ ಎಂದರೆ ಸರಿಯಲ್ಲ. ಮುನಿವೆಂಕಟಪ್ಪರವರಿಗೆ ಮೂರು ಜನ ಮಕ್ಕಳು ಅವರೆಂದರೆ ವೆಂಕಟೇಶ್, ಶ್ರೀನಿವಾಸ್ ಮತ್ತು ಮುನಿಸ್ವಾಮಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಕಿಚ್ಚಪ್ಪನ ಮಕ್ಕಳು ಎಂದು ಹೇಳುತ್ತಾರೆ. ಪಾಪಣ್ಣನ 2ನೇ ಮಗ ಕಿಚ್ಚಪ್ಪ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ವಂಶವೃಕ್ಷ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಮುನಿವೆಂಕಟಪ್ಪನ ಮಗ ವೆಂಕಟೇಶ್ ಇವರಿಗೆ ಇಬ್ಬರು ಹೆಂಡತಿಯ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೆಗೆ ಒಬ್ಬರೇ ಹೆಂಡತಿ ಇರುತ್ತಾರೆ ಆದರೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ಮತ್ತು 2 ರವರ ತಾಯಿಯ ಹೆಸರು ಈರಮ್ಮ ಆಗಿರುತ್ತದೆ. ಪ್ರತಿವಾದಿ 5 ಮತ್ತು 6 ರವರ ತಾಯಿಯ ಹೆಸರು ಸಾವಿತ್ರಮ್ಮ ಎಂದರೆ ಸರಿ. ಮುನಿವೆಂಕಟಪ್ಪರವರ 2ನೇ ಮಗ ಮುನಿಸ್ವಾಮಿ ಎಂದರೆ ಸರಿಯಲ್ಲ.

ಪ್ರತಿವಾದಿ 7 ರವರ ತಂದೆಯ ಹೆಸರು ಮುನಿವೆಂಕಟಪ್ಪ ಅವರನ್ನು ವಾಡಿಕೆಯಲ್ಲಿ ಕಿಚ್ಚಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಮುನಿವೆಂಕಟಪ್ಪರವರ 3ನೇ ಮಗ ಶ್ರೀನಿವಾಸ್ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಿಚ್ಚಪ್ಪನ ಮಗ ಎಂದು ಹೇಳುತ್ತಾರೆ. ಶ್ರೀನಿವಾಸ್‌ರವರ ಹೆಂಡತಿ ಲಕ್ಷ್ಮೀದೇಮಮ್ಮ ಅವರಿಗೆ ಮೂರು ಜನ ಮಕ್ಕಳು ಅವರೆಂದರೆ ಪದ್ಮಾವತಿ, ಸುಗುಣ ಮತ್ತು ವಿಜಯಲಕ್ಷ್ಮಿ. ವಿಜಯಲಕ್ಷ್ಮೀ ಇವರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಾಪಣ್ಣನ 3ನೇ ಮಗ ವೆಂಕಟಪ್ಪ ಎಂದರೆ ಸರಿ. ವೆಂಕಟಪ್ಪನ ಹೆಂಡತಿಯ ಹೆಸರು ಸರಸಮ್ಮ. ಸರಸಮ್ಮ ಇವರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರಸಮ್ಮರವರ ಮಕ್ಕಳು ಶ್ರೀಧರ, ರಮೇಶ, ಪ್ರಕಾರ, ವಿಜಯಲಕ್ಷ್ಮೀ ಮತ್ತು ಗೀತಾ ಎಂದರೆ ಸಾಕ್ಷಿಯು ರಮೇಶ್ ಎನ್ನುವವರು ಇರುವುದಿಲ್ಲ ಎಂದು ಹೇಳುತ್ತಾರೆ. ರಮೇಶ್ ಇವರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ರಮೇಶ್ ಇವರ ಸರಸಮ್ಮ ಇವರ ಮಗನಾಗಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚೆಂಗಲರಾಯಪ್ಪನಿಗೆ ಇಬ್ಬರು ಮಕ್ಕಳು ಅವರೆಂದರೆ ಮುನಿಯಪ್ಪ ಮತ್ತು ಚಿಕ್ಕವೆಂಕಟಪ್ಪ ಎಂದರೆ ಸರಿ. ಕಾಮಕ್ಕ ತೀರಿಕೊಂಡಿರುತ್ತಾರೆ. ಅವರ ಮಕ್ಕಳು ಸೀನಪ್ಪ, ಸುಬ್ರಮಣಿ ಮತ್ತು ಚೆಂಗಲರಾಯಪ್ಪ, ಚಿಕ್ಕವೆಂಕಟಪ್ಪನಿಗೆ ಸೀತಮ್ಮ ಎನ್ನುವ ಹೆಂಡತಿ ಅವರಿಗೆ ನಾರಾಯಣಸ್ವಾಮಿ, ಸೋಮಶೇಖರ್, ರೆಡ್ಡಮ್ಮ ಎಂಬ ಮಕ್ಕಳು. ರೇಣುಕಾ, ರೇವತಿ, ರೆಡ್ಡಮ್ಮ ಸೋಮಶೇಖರ್ ಇವರ ಮಕ್ಕಳು. ಸೋಮಶೇಖರ್ ತೀರಿಕೊಂಡಿರುತ್ತಾರೆ. ರೇಣುಕಾ, ರೇವತಿ, ರೆಡ್ಡಮ್ಮ ಇವರನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ನಾನು ಮುನಿಯಪ್ಪನ ವಾರಸುದಾರರನ್ನು ತೋರಿಸಲು ವಂಶವೃಕ್ಷವನ್ನು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.